ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ 165 ವರ್ಗಾವಣೆ 2016-17 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:17-01-2017

**ಸುತ್ತೋಲೆ**

ವಿಷಯ: ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಇಎಂಐಎಸ್ ತಂತ್ರಾಂಶದಲ್ಲಿ ಮಾಹಿತಿಗಳನ್ನು ಅಪ್‌ಲೋಡ್ ಮಾಡುವ ಬಗ್ಗೆ.

*****

2017-18ನೇ ಸಾಲಿನ ವರ್ಗಾವಣೆ ಹಾಗೂ 2160 ಹೊಸ ಉಪನ್ಯಾಸಕರುಗಳ ನೇಮಕಾತಿ ಪ್ರಕ್ರಿಯೆ ಸಂಬಂಧದಲ್ಲಿ ಕಾರ್ಯಭಾರ/ಖಾಲಿ ಹುದ್ದೆ ಮಾಹಿತಿಗಳು ಅಗತ್ಯವಿದ್ದು, ಪ್ರಸ್ತುತ ತಮ್ಮ ಕಾಲೇಜಿನಲ್ಲಿ 2016-17ನೇ ಸಾಲಿನಲ್ಲಿ ಲಭ್ಯವಿರುವ ಎಲ್ಲಾ ವಿಷಯವಾರು ನಿಖರವಾದ ಬೋಧನಾ ಕಾರ್ಯಭಾರ ವಿವರಗಳನ್ನು ಕಾಲೇಜಿನ ಇಎಂಐಎಸ್ ತಂತ್ರಾಂಶದಲ್ಲಿ ನಮೂದಿಸುವಂತೆ ಮತ್ತು ಕಾಲೇಜಿನಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ (ಲೀನ್ ಹೊಂದಿರುವ) ಬೋಧಕರ ವಿವರಗಳನ್ನು ಇಎಂಐಎಸ್‌ನಲ್ಲಿ ಸರಿಯಾಗಿರುವ ಬಗ್ಗೆ ಪರಿಶೀಲಿಸಿ, ದೃಢೀಕರಿಸಿ ದಿನಾಂಕ:27-01-2017ರ ಒಳಗೆ ಕಡ್ಡಾಯವಾಗಿ ಅಪ್‌ಲೋಡ್ ಮಾಡುವಂತೆ ಸೂಚಿಸಲಾಗಿದೆ.

ಪ್ರಸ್ತುತ ನಿಮ್ಮ ಕಾಲೇಜಿನಲ್ಲಿ ಲಭ್ಯವಿರುವ ಎಲ್ಲಾ ವಿಷಯಗಳ ನಿಖರವಾದ ಬೋಧನಾ ಕಾರ್ಯಭಾರ ವಿವರಗಳನ್ನು ಕಾಲೇಜಿನ ಇಎಂಐಎಸ್ ತಂತ್ರಾಂಶದಲ್ಲಿ Work Load Details 2016-17 ಮೆನು ಒಳಗಿನ Enter Work load details ಲಿಂಕ್‌ನಲ್ಲಿ ನಮೂದಿಸಲು ಸೂಚಿಸಿದೆ. ಸದರಿ ನಮೂನೆಯಲ್ಲಿ ಹಾಲಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ (ಲೀನ್ ಹೊಂದಿರುವ) ಸರಿಯಾಗಿರುವ ಬಗ್ಗೆ ಪರಿಶೀಲಿಸುವಂತೆ ಸೂಚಿಸಿದೆ. ಮಾಹಿತಿ ಸರಿಯಾಗಿಲ್ಲದ ಪಕ್ಷದಲ್ಲಿ, ಬೋಧಕರ ವಿವರಗಳು Reports ಮೆನು ಒಳಗಿನ Faculty Profile Reports ಲಿಂಕ್‌ನಲ್ಲಿ ಲಭ್ಯವಿದ್ದು, ಅದರಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಸರಿಪಡಿಸಲು ಸೂಚಿಸಿದೆ. ತದನಂತರದಲ್ಲಿ Work Load 2016-17 ಮೆನು ಒಳಗಿನ Enter Work load details ಲಿಂಕ್‌ನಲ್ಲಿ ಎಲ್ಲಾ ಮಾಹಿತಿಗಳು ಸರಿಯಾಗಿ ಪ್ರದರ್ಶಿತವಾಗುತ್ತಿರುವ ಬಗ್ಗೆ ಮತ್ತೊಮ್ಮೆ ಖಚಿತಪಡಿಸಿಕೊಂಡು, ಸದರಿ ನಮೂನೆಯನ್ನು Download ಮಾಡಿಕೊಂಡು ಪ್ರಾಂಶುಪಾಲರು ದೃಢೀಕರಿಸಿ, ಸ್ಕ್ಯಾನ್ ಮಾಡಿ, ಇಎಂಐಎಸ್‌ನಲ್ಲಿ ಲಭ್ಯವಿರುವ Work Load Details 2016-17 ಮೆನು ಒಳಗಿನ Upload Work load and Staff details ಲಿಂಕ್‌ನಲ್ಲಿ ದಿನಾಂಕ:27-01-2017ರ ಒಳಗೆ ಕಡ್ಡಾಯವಾಗಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ. ಸದರಿ ಮಾಹಿತಿಯ ಆಧಾರದ ಮೇಲೆ ವರ್ಗಾವಣೆ ಹಾಗೂ ಉಪನ್ಯಾಸಕರ ನೇಮಕಾತಿ ಮಾಡುವುದರಿಂದ ಕಾರ್ಯಭಾರ ಮತ್ತು ಖಾಲಿ ಹುದ್ದೆಗಳಿಗೆ ಸಂಬಂಧಿಸಿದಂತೆ ವರ್ಗಾವಣೆ/ನೇಮಕಾತಿ ಸಂದರ್ಭದಲ್ಲಿ ನ್ಯೂನತೆಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಅದೇ ಪ್ರಕಾರವಾಗಿ Non-Teaching Staff Reports ಲಿಂಕ್‌ನಲ್ಲಿನ ವಿವರಗಳನ್ನು ಕೂಡಾ download ಮಾಡಿಕೊಂಡು ಸದರಿ ವಿವರಗಳು ಸರಿಯಿದೆ ಎಂದು ಪರೀಕ್ಷಿಸಿ, ಸದರಿ ಮಾಹಿತಿ ಪ್ರತಿಯನ್ನು ಪ್ರಾಂಶುಪಾಲರು ದೃಢೀಕರಿಸಿ, ಸ್ಕ್ಯಾನ್ ಮಾಡಿ, ಇಎಂಐಎಸ್ ನಲ್ಲಿ ಲಭ್ಯವಿರುವ Upload Workload and Staff details ಲಿಂಕ್‌ನಲ್ಲಿ ದಿನಾಂಕ:27-01-2017ರ ಒಳಗೆ ಕಡ್ಡಾಯವಾಗಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಕೈಬರಹ/ಬೆರಳಚ್ಚು ಮಾಡಲಾದ ಪ್ರತಿಗಳನ್ನು ಅಪ್‌ಲೋಡ್ ಮಾಡಿದಲ್ಲಿ ಅದನ್ನು ತಿರಸ್ಕರಿಸಲಾಗುವುದು ಎಂದು ತಿಳಿಸಲಾಗಿದೆ.

EMIS ನಲ್ಲಿ ಮಾಹಿತಿಗಳನ್ನು ಅಪ್‌ಲೋಡ್ ಮಾಡುವ ಸಂದರ್ಭದಲ್ಲಿ, ಅಪೂರ್ಣ ಮಾಹಿತಿಗಳನ್ನು ಮಾಡುವುದು ಹಾಗೂ ಮಾಹಿತಿಗಳನ್ನು ಪರಿಶೀಲಿಸದೇ ತಪ್ಪು ಮಾಹಿತಿಗಳನ್ನು ಅಪ್‌ಲೋಡ್ ಮಾಡುವುದು, ಕಾಲೇಜಿನಲ್ಲಿ ಲೀನ್ ಹೊಂದದಿರುವ ಸಿಬ್ಬಂದಿಗಳ ವಿವರಗಳನ್ನು ಅಪ್‌ಲೋಡ್ ಮಾಡದಿರುವುದು, ಕಾರ್ಯಭಾರ ವಿವರಗಳನ್ನು ಸರಿಯಾಗಿ ನೀಡದಿರುವುದು ಮೊದಲಾದ ನ್ಯೂನತೆಗಳನ್ನು ಗಮನಿಸಲಾಗಿರುತ್ತದೆ.

**ಉದಾಹರಣೆ:**

1. ಕಾಲೇಜಿನಲ್ಲಿ ಲೀನ್ ಹೊಂದಿರುವ (ವೇತನ ಪಡೆಯುತ್ತಿರುವ) ಎಲ್ಲಾ ಸಿಬ್ಬಂದಿಗಳ ವಿವರಗಳನ್ನು ಅಪ್‌ಲೋಡ್ ಮಾಡದೇ ಇರುವುದು.
2. ಪ್ರಭಾರ ಪ್ರಾಂಶುಪಾಲರಾಗಿ ಅನ್ಯ ಕಾರ್ಯ ನಿಮಿತ್ತ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ವಿವರಗಳನ್ನು ಮಾತ್ರ ಕಾಲೇಜಿನಲ್ಲಿ ನಮೂದಿಸದೇ ನಿಯೋಜಿಸಲ್ಪಟ್ಟ ಕಾಲೇಜಿನಲ್ಲಿ ನಮೂದಿಸಿರುವುದು.
3. ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಪದನಾಮವನ್ನು ಪ್ರಾಂಶುಪಾಲರೆಂದು ನಮೂದಿಸಿರುವುದು.
4. ನಿಯೋಜನೆ/ಅನ್ಯ ಕಾರ್ಯನಿಮಿತ್ತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರವನ್ನು ಲೀನ್ ಇರುವ (ವೇತನ ಪಡೆಯುತ್ತಿರುವ) ಕಾಲೇಜಿನಲ್ಲಿ ಅಪ್‌ಲೋಡ್ ಮಾಡದೇ, ನಿಯೋಜನೆ/ ಅನ್ಯಕಾರ್ಯ ನಿಮಿತ್ತ ಸೇವೆ ಸಲ್ಲಿಸುತ್ತಿರುವ ಕಾಲೇಜುಗಳಲ್ಲಿ ಅಪ್‌ಲೋಡ್ ಮಾಡಿರುವುದು.
5. ಅನೇಕ ಪ್ರಕರಣಗಳಲ್ಲಿ ಸಿಬ್ಬಂದಿಗಳ ವಿವರವನ್ನು ಲೀನ್ ಇರುವ ಹಾಗೂ ನಿಯೋಜನೆ/ಅನ್ಯ ಕಾರ್ಯ ನಿಮಿತ್ತ ಕಾರ್ಯನಿರ್ವಹಿಸುತ್ತಿರುವ ಎರಡೂ ಕಾಲೇಜುಗಳಲ್ಲಿಯೂ ಅಪ್‌ಲೋಡ್ ಮಾಡಿರುವುದು.
6. ಸಿಬ್ಬಂದಿಗಳ Profile ನಲ್ಲಿ ಸೇವಾ ವಿವರಗಳಲ್ಲಿ ನೇಮಕಾತಿ ದಿನಾಂಕದಿಂದ ಇಲ್ಲಿಯವರೆಗೆ ಸೇವೆ ಸಲ್ಲಿಸಿರುವ ಕಾಲೇಜುಗಳ ವಿವರಗಳು ಅಪೂರ್ಣವಾಗಿರುವುದು ಮತ್ತು ನಿಯೋಜನೆ/ಅನ್ಯ ಕಾರ್ಯ ನಿಮಿತ್ತ ಸಲ್ಲಿಸಿರುವ ಸೇವೆಯ ವಿವರಗಳನ್ನು ಸಹ ಅಪ್ ಲೋಡ್ ಮಾಡಿರುವುದು ಇತ್ಯಾದಿ

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿಗಳನ್ನು ಪರಿಶೀಲಿಸಿ, ಸರಿಯಾದ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಸೂಚಿಸಿದೆ.

**ಸೂಚನೆಗಳು:**

1. **ವರ್ಗಾವಣೆಗೆ ಅರ್ಹತೆ ಪಡೆಯುವ ಸಲುವಾಗಿಯೇ ಸೇವಾ ವಿವರಗಳನ್ನು ತಪ್ಪಾಗಿ ನಮೂದಿಸಿರುವುದು ಇಲಾಖೆಯ ಗಮನಕ್ಕೆ ಬಂದಲ್ಲಿ ಸಂಬಂಧಿಸಿದ ಪ್ರಾಂಶುಪಾಲರು ಮತ್ತು ಸಿಬ್ಬಂದಿಯ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳಲು ಸೂಚಿಸಲಾಗಿದೆ.**
2. ಅನ್ಯ ಕಾರ್ಯ ನಿಮಿತ್ತ/ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು/ ಸಿಬ್ಬಂದಿಗಳು ತಮ್ಮ Profile ವಿವರಗಳನ್ನು ತಮ್ಮ ಮಾತೃ ಕಾಲೇಜಿನಲ್ಲಿಯೇ ಅಪ್‌ಲೋಡ್ ಮಾಡಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಈ ಮೂಲಕ ಸೂಚಿಸಿಲಾಗಿದೆ.
3. ಸರ್ಕಾರದ ವಶಕ್ಕೆ ಪಡೆಯಲಾದ ಖಾಸಗಿ ಅನುದಾನಿತ ಕಾಲೇಜುಗಳ ಸಿಬ್ಬಂದಿಗಳ ಸೇವೆಯನ್ನು ಸದರಿ ಕಾಲೇಜನ್ನು ಸರ್ಕಾರ ವಹಿಸಿಕೊಂಡ ದಿನಾಂಕದಿಂದ ಮಾತ್ರ ವರ್ಗಾವಣೆಗೆ ಪರಿಗಣಿಸಬೇಕಾಗಿರುತ್ತದೆ. ಆದುದರಿಂದ Staff Profile ನಲ್ಲಿ date from which working in present college ನಲ್ಲಿ ಸರ್ಕಾರ ಕಾಲೇಜನ್ನು ವಶಕ್ಕೆ ಪಡೆದ ದಿನಾಂಕವನ್ನು ನಮೂದಿಸಲು ಸೂಚಿಸಲಾಗಿದೆ. (ಸರ್ಕಾರದ ವಶಕ್ಕೆ ಪಡೆಯಲಾದ ದಿನಾಂಕದಿಂದ ಇಂದಿನವರೆಗೆ ಅದೇ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಮಾತ್ರ ಅನ್ವಯಿಸುತ್ತದೆ).

Sulpan

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

**ಇವರಿಗೆ:**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ – ತುರ್ತು ಕ್ರಮಕ್ಕಾಗಿ.
3. ಸಂಬಂಧಪಟ್ಟ ಸಹ/ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ-ಅಗತ್ಯ ಕ್ರಮಕ್ಕಾಗಿ.
4. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಅಗತ್ಯ ಕ್ರಮಕ್ಕಾಗಿ.
5. ಕಛೇರಿ ಪ್ರತಿ.

*DCE_165 Circular*